ಬಿಡಿಸಿಬಿಟ್ಟಿದ್ದಳು. ಮೃತ್ಯೂವಿನೊಂದಿಗೆ ಲಗ್ನವನ್ನು ಯಾವ ತೆರನಾಗಿಯೂ ನಿಲ್ಲಿಸಲು ಅವಳಿಗೆ ಸಾಧ್ಯವೇ ಇರಲಿಲ್ಲ. "ಪ್ರಪಂಚದ ಯಾವ ಜೀವಿಯನ್ನೂ ಯಾರ ಋಣದಲ್ಲೂ ಇರಿಸಬ್ಯಾಡಪ್ಪ ಶಿವನೇ" ಗೌರಿ ನಿಟ್ಟುಸಿರು ಬಿಡುತ್ತಾ ಕೇಳಿಕೊಳ್ಳುವುದೊಂದೇ ದೇವರಲ್ಲಿ. ಮೃತ್ಯುವನ್ನಪ್ಪಿಕೊಂಡಿದ್ದ ಅವ್ವಾ ಅವಳನ್ನು ದೂರ ಮಾಡಿದ್ದಳು. ತಾತಾ ಅವರ ಮನೆ, ಮಕ್ಕಳುಗಳ, ಉದ್ಧಾರದ ಮಾತಲ್ಲಿಯೇ ಇರುತ್ತಿದ್ದದ್ದು. ಊರವರು 'ಮೃತ್ಯೂನಾ ಹೆಂಡತಿ' ಎಂದು ನಗೆಸಾರ ಮಾಡುತ್ತಿದ್ದರು. ಮದುವೆಯಾದಾಗಲೂ ಗೇಲಿಯ ನೋಟವನ್ನೇ ಹರಿಸಿದ್ದು! ಇಷ್ಟೆಲ್ಲದರ ನಡುವೆಯೂ ಅವಳು ಬದುಕಲೇಬೇಕು. ಅವ್ವ ಹೇಳಿದಂತೆ ಹೋಗಲೆಲ್ಲೂ ಎಡೆಯಿಲ್ಲ. ಅವ್ವ, ಋಣದ ಭಾರವನ್ನು ಸ್ವಲ್ಪ ಹಿಂದೂಡಿ ತನ್ನನ್ನು ಓದಲು ಬಿಟ್ಟಿದ್ದರೆ ಆಗಿತ್ತು. ಹೋಗಲಾದರೂ ಒಂದು ಎಡೆ ಹುಡುಕಿಕೊಳ್ಳಬಹುದಿತ್ತು. ಆದರೆ ಅದೆಲ್ಲ ಈಗ ಕನಸ ಮಾತು. ಮೊದಲೇ ಮೌನಿಯಾಗಿದ್ದ ಗೌರಿ ಅವ್ವನ ಮಾತುಗಳಿಗೂ ಮೌನಿಯಾಗಿಬಿಟ್ಟಿದ್ದಳು.

★★★

'ಮೃತ್ಯೂ ಹೆಂಡ್ತಿ ನೀರ್ ನಿಂತಕಂತಾ' ಅಕ್ಕಪಕ್ಕದ ಹೆಂಗಳೆಯರು ಪಾರೋತಕ್ಕನ ಬಳಿ ಕೇಳಲು ಆರಂಭಿಸಿದ್ದ ದಿನಮಾನಗಳವು. ನಿಜವೋ ಸುಳ್ಳೋ?! ಮೃತ್ಯುವಿಗೆ ನಗರದಲ್ಲಿ ಕೆಲಸ ಸಿಕ್ಕ ಸುದ್ದಿಹಬ್ಬಿಕೊಂಡಿತ್ತು. ಕಣ್ಣು ಮುಚ್ಚಿ ಬಿಡುವಷ್ಟರಲ್ಲಿ ಮೃತ್ಯು ಹೆಗಲಿಗೊಂದು ಬ್ಯಾಗೇರಿಸಿಕೊಂಡು ಯಾರಿಗೂ ಹೇಳದೇ ಕೇಳದೆ, ಏನು? ಎತ್ತ? ಎಲ್ಲಿ? ಎಂಬ ಪ್ರಶ್ನೆಗಳನ್ನು ಉಳಿಸಿ ಕೈ ಬೀಸಿ ನಡೆದು ಬಿಟ್ಟಿದ್ದನು. ಆಗ ಬರುತ್ತಾನೆ, ಈಗ ಬರುತ್ತಾನೆ, ಹಬ್ಬಕ್ಕೆ ಬರುತ್ತಾನೆ. ಜಾತ್ರೆಗೆ ಬರುತ್ತಾನೆ ಒಂದೊಂದಕ್ಕೂ ಕಾದದ್ದೇ ಬಂತು. ಹಟ್ಟಿಯವರ ಮೇಲೆ ಅವನಿಗೆ ಅದಾವ ಬಗೆಯ ಅಸಹನೆ, ಸಿಟ್ಟುಗಳಿತ್ತೋ, ನಿರಾಕರಣೆಯ ಭಾವಗಳಿತ್ತೋ ಹಳ್ಳಿಯತ್ತ ಮುಖ ಮಾಡಲೇ ಇಲ್ಲ. ತಿಂಗಳುಗಳು ಉರುಳಿದ್ದವು. ಮಾಲಿಂಗಪ್ಪ ಮೌನವಾಗಿ ಹಾಸಿಗೆ ಹಿಡಿದಿದ್ದರು. ಪಾರೋತವ್ವನ ಗೋಳಾಟ ಹೇಳತೀರದಾಗಿತ್ತು. ಮೃತ್ಯು ಹಾಗೆ ಹೇಳದೆ ಕೇಳದೆ ಹೋಗುವಲ್ಲಿ ತಮ್ಮ ತಪ್ಪೇನಾದರೂ ಇತ್ತೆ? ಹುಡುಕ ತೊಡಗಿದ್ದಳು. ಸುತ್ತಿ ಬಳಸಿಯೂ ಅವಳ ಆಲೋಚನೆ, ಮಗಳ ಮೇಲೆಯೇ ಗೂಬೆ ಕೂರಿಸ ತೊಡಗಿತ್ತು.

ಮೃತ್ಯೂ ಹಟ್ಟಿ ಬಿಟ್ಟು ಹೋದಾಗಿನಿಂದ ಗೌರಿ ಜೀವ ಬಂದವಳಂತೆ ಬದುಕತೊಡಗಿದ್ದಳು. ತಾತ, ಅವ್ವರ ಬೇಕು ಬೇಡಗಳನ್ನು ತಾನೇ ವಹಿಸಿಕೊಂಡು ನೋಡಿಕೊಳ್ಳತೊಡಗಿದ್ದಳು. ಅವರಿಬ್ಬರೂ ಕಂಗೆಟ್ಟು ಕೂತಾಗ ಇಡೀ ಹಟ್ಟಿಯ ಜವಾಬ್ದಾರಿಯನ್ನು ಅವಳು ತನ್ನ ಹೆಗಲಿಗೇರಿಸಿಕೊಂಡಿದ್ದಳು. ಅಪ್ಪಾ, ಮಗಳು ಗೌರಿಯ ಕಡೆ ಬುಟ್ಟಗಣ್ಣು ಬುಟ್ಟ ಹಾಗೆ ನೋಡಿದ್ದರು. ಅವಳ ಕಣ್ಣುಗಳು ತಮ್ಮ ಭಾವ ಬಿಟ್ಟುಕೊಟ್ಟಿರಲಿಲ್ಲ. ಮುಖದ ದಿವ್ಯಮೌನ ಅರ್ಥವನ್ನು ಬಿಟ್ಟು ಕೊಟ್ಟಿರಲಿಲ್ಲ.

ವರುಷಗಳು ಉರುಳಿದ್ದವು. ಮಾಲಿಂಗಪ್ಪ ವಯೋಸಹಜ ಮರಣವಪ್ಪಿದ್ದರು. ದೊಡ್ಡ ಮಾವಂದಿರು ಬಂದರು. ಮೃತ್ಯುವಿನ ಸುಳಿವೇ ಇಲ್ಲ. ಸಾಂಗವಾಗಿ 'ಒಪ್ಪ' ನಡೆದಿತ್ತು. ಹಿಂದಿನಿಂದಲೇ ಆಸ್ತಿ ಹಂಚಿಕೆಯೂ ನಡೆದುಹೋಗಿತ್ತು. ಅಣ್ಣಂದಿರಿಗೆ, ಅಪ್ಪನ ಸಾವಿಗೂ ಬಾರದ ಮೃತ್ಯು ಸತ್ತದ್ದು ಒಂದು ಲೆಕ್ಕವೇ! ಆ ಮಾತು ಕೇಳಿ ಪಾರೋತಕ್ಕ ಕಂಗಾಲಾಗಿದ್ದಳು. ಮೃತ್ಯುವನ್ನು ವಹಿಸಿ ಮಾತನಾಡಲು ಬೇಕಾದ ಒಂದೇ ಒಂದು ಸಂಗತಿಯಾಗಲಿ, ಅವರೆದುರು ಮಾತನಾಡುವ ಧೈರ್ಯವಾಗಲಿ ಈಗ ಅವಳಲ್ಲಿ ಇರಲಿಲ್ಲ. ಎಲ್ಲವನ್ನೂ ಹಂಚಿಯಾದ ಮೇಲೆ ಅದೊಂದು ಬಗೆಯ ಧರ್ಮಾರ್ಥವೋ ಎಂಬಂತೆ, ಅವರಿಗೆ ಬೇಕಿಲ್ಲವಾದ ಕಾರಣವೂ ಸೇರಿಕೊಂಡಂತೆ ಅವರಿದ್ದ ಮನೆ, ಎರಡು ಹಸು, ಎರಡೆಕರೆ ಹೊಲವನ್ನು ಅವ್ವ, ಮಗಳಿಗೆಂದು ಬಿಟ್ಟು ತಮ್ಮ ಊರುಗಳಿಗೆ ಮರಳಿದ್ದರು. ಮತ್ತೆ ಆರು ತಿಂಗಳಲ್ಲಿ ತಮ್ಮ ಪಾಲಿನ ಆಸ್ತಿಯನ್ನು ಮಾರಿ, ಈ ಅವ್ವ ಮಗಳ ಸಂಬಂಧವನ್ನೂ ಹರಿದುಕೊಂಡುಬಿಟ್ಟಿದ್ದರು.